# <u>ಪತ್ರಿಕಾ ಪ್ರಕಟಣೆ</u>

ಈ ದಿನ ಖಚಿತ ಮಾಹಿತಿ ಮೇರೆಗೆ ಮಂಗಳೂರು ನಗರದ ಸಿಸಿಬಿ ಘಟಕದ ಅಧಿಕಾರಿ/ಸಿಬ್ಬಂದಿಯವರು ದೆರಳಕಟ್ಟೆಯ ಬಳಿ ದಾಳಿಯೊಂದನ್ನು ನಡೆಸಿ ವಿಧ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾದಕ ವಸ್ತುವನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಅಬ್ದುಲ್ ಯಾನೆ ಪೋಕರ ಅಜೀಜ್ ಎಂಬ ವ್ಯಕ್ತಿಯನ್ನು ದಸ್ತಗಿರಿ ಮಾಡಿರುತ್ತಾರೆ. ದಸ್ತಗಿರಿಯಾದ ವ್ಯಕ್ತಿ ಕಡೆಯಿಂದ ಸುಮಾರು 1.30,000 ರೂ ಬೆಲೆ ಬಾಳುವ 26 ಗ್ರಾಂ ಎಂಡಿಎಂಎ ಎಂಬ ಮಾದಕ ವಸ್ತುವನ್ನು ವಶ ಪಡಿಸಿಕೊಳ್ಳಲಾಯಿತು. ಈ ಸಂಬಂಧ ಆರೋಪಿತನ ವಿರುದ್ಧ ಕೊಣಾಜೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಆರೋಪಿತನ ವಿರುದ್ಧ ಈಗಾಗಲೇ ಮಂಗಳೂರು ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಮಾದಕ ವಸ್ತು ಮಾರಾಟ ಸಂಬಂಧ 7 ಪ್ರಕರಣಗಳು ದಾಖಲಾಗಿರುತ್ತವೆ.

ಈ ದಾಳಿಯು ಮಂಗಳೂರು ನಗರದ ಪೊಲೀಸ್ ಆಯುಕ್ತರಾದ ಶ್ರೀ ಅನುಪಮ್ ಅಗ್ರವಾಲ್ ಐಪಿಎಸ್ ರವರ ಮಾರ್ಗದರ್ಶನದಲ್ಲಿ ಸಿಸಿಬಿ ಘಟಕದ ಎಸಿಪಿ ಯವರಾದ ಶ್ರೀ ಪಿ.ಎ ಹೆಗಡೆ ಹಾಗೂ ಸಿಬ್ಬಂದಿಯವರಿಂದ ನಡೆಸಲಾಯಿತು

ಸಹಿ/-

ದಿನಾಂಕ: 20-10-2023 ಪೊಲೀಸ್ ಆಯುಕ್ತರು

ಸ್ಥಳ: ಮಂಗಳೂರು ಮಂಗಳೂರು ನಗರ